ಹೋಗೋದು?' ಎಂದಳು ಸೌಮ್ಯ.

ಸ್ವಲ್ಪಹೊತ್ತು ಯೋಚಿಸಿದ ರಂಗಮ್ಮನಿಗೆ, ಮಗಳು ಹೇಳುವುದರಲ್ಲಿಯೂ ಸತ್ಯವಿದೆ ಎನ್ನಿಸಿತು. ಮುಂದೆ ಮದುವೆಯಾಗಿ ಬಾಳಬೇಕಾದವಳಿಗೆ ಊರಿನಲ್ಲಿ ಮರ್ಯಾದೆ ಹೋದರೆ ಭವಿಷ್ಯಕ್ಕೆ ತೊಂದರೆಯಾಗುತ್ತದೆ, ಮಗಳ ಹೆಸರು ಎಲ್ಲೂ ಬಾರದಂತೆ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದುಕೊಂಡಳು. 'ಆಯ್ತು, ಇದನ್ನು ದೊಡ್ಡದು ಮಾಡಿ ನಿನ್ನ ಮರ್ಯಾದೆ ತೆಗೆಯೋದಿಲ್ಲ. ಆದರೆ ಆ ವಿಷದ ಹಾವನ್ನು ಮಾತ್ರ ಸಾಯಿಸದೆ ಬಿಡೋಲ್ಲ' ಎಂದಳು ರಂಗಮ್ಮ. ಮುಳ್ಳಿಗೆ ಬಟ್ಟೆ ಸಿಕ್ಕಿಹಾಕಿಕೊಂಡಿದೆ, ಅದನ್ನು ಹರಿಯದೆ ಉಪಾಯವಾಗಿ ನಿಧಾನವಾಗಿ ಬಿಡಿಸಿಕೊಳ್ಳಬೇಕು ಎಂದುಕೊಂಡಳು. ಎದುರಾಳಿಗಳಿಲ್ಲದೆ ಬರೀ ಗಾಳಿಯಲ್ಲಿ ಗುದ್ದಾಡುತ್ತಿದ್ದ ರಂಗಮ್ಮನಿಗೆ ಈಗ ಶತ್ರುವೊಬ್ಬ ಬಂದು, ಅವಳಲ್ಲಿ ಹೊಸ ಆವೇಶವನ್ನು ತಂದಿದ್ದ.

ರಂಗಮ್ಮನು ಮಗಳಿಗೆ ಧೈರ್ಯ ತುಂಬಿ, ಬಹಳ ಯೋಚಿಸಿದ ನಂತರ ಹೊಳೆದ ಒಂದು ಉಪಾಯವನ್ನು ಮಗಳಿಗೆ ಹೇಳಿ ಸ್ಕೂಲಿಗೆ ಹೋಗಲು ಒಪ್ಪಿಸಿದಳು. ಬಸ್ಸಿನಲ್ಲಿ ಮತ್ತೆ ಅಂತಹ ಸಂದರ್ಭ ಎದುರಾದರೆ ಅವಳು ಏನು ಮಾಡಬೇಕೆಂಬುದನ್ನು ಮಗಳಿಗೆ ಹೇಳಿಕೊಟ್ಟಳು.

ಶಿವಗಂಗಾ ಬಸ್ಸು ಎಂದಿನಂತೆ ಭರ್ತಿಯಾಗಿ ಜನರನ್ನು ತುಂಬಿಕೊಂಡು ಬಂದು ನಿಂತಿತು. ರಂಗಮ್ಮನು ಬೆಳಿಗ್ಗೆಯೇ ಕ್ಯಾಂಪಿಗೆ ಹೋಗಿ ತಂದಿದ್ದ ಚೂಪಾದ, ಗಟ್ಟಿಯಾದ ಕತ್ತಾಳೆ ಮುಳ್ಳು ಸೌಮ್ಯಳ ಕೈಯಲ್ಲಿ ಭದ್ರವಾಗಿ ಕುಳಿತಿತ್ತು. ಸ್ವಲ್ಪ ಹೆದರಿಕೆಯಿಂದ ಸ್ಕೂಲಿಗೆ ಹೊರಟಿದ್ದರೂ, ಮುಷ್ಠಿಯಲ್ಲಿ ಹಿಡಿದಿದ್ದ ತಾಯಿಯು ಕೊಟ್ಟ ಕತ್ತಾಳೆ ಮುಳ್ಳು ಸೌಮ್ಯಳಿಗೆ ಅಭಯ ನೀಡುತ್ತಿತ್ತು. ಕಾಲಿಡಲು ಜಾಗವಿರದ ಬಸ್ಸಿನಲ್ಲಿ ಸೌಮ್ಯ ಹೇಗೋ ಹತ್ತಿ ಜಾಗ ಮಾಡಿಕೊಂಡು ನಿಂತಳು. ಬಸ್ಸು ಜನರಿಂದ ಮತ್ತು ಅವರ ಗದ್ದಲದಿಂದ ತುಂಬಿತುಳುಕುತ್ತಿತ್ತು. ಇದರ ಮಧ್ಯೆ ಬಸ್ಸಿನಲ್ಲಿ ಹಾಕಿದ್ದ ಯಾವುದೋ ಕಿತ್ತೋದ ಟ್ಯೂನಿನ ಹಾಡು ತಾರಕ ಸ್ವರದಲ್ಲಿ ಅಬ್ಬರಿಸುತ್ತಿತ್ತು. ಸೌಮ್ಯಳಿಗೆ ತನ್ನ ಸುತ್ತಮುತ್ತ ಅನುಮಾನಾಸ್ಪದ ವ್ಯಕ್ತಿಗಳೇನೂ ಕಾಣಲಿಲ್ಲ. ತಾನು ಇನ್ನು ಮುಂದೆ ಓದಿನ ಕಡೆಗೆ ಹೆಚ್ಚು ಗಮನಹರಿಸಬೇಕು ಎಂದು ಯೋಚಿಸುತ್ತಾ ಮೈಮರೆತಿರಬೇಕಾದರೆ, ಅಚಾನಕ್ಕಾಗಿ ಕತ್ತಿನ ಹತ್ತಿರ ಯಾರದೋ ಬಿಸಿಯುಸಿರು ಹಿಂದಿನಂತೆ ತಾಕಿತು. ಗದ್ದಲದ ನಡುವೆಯೂ, ಕಿವಿಯ ಹತ್ತಿರ ಎಂತದೋ ಪಿಸುಮಾತುಗಳು ಮಂತ್ರದಂತೆ ಕೇಳಿಬರತೊಡಗಿದವು. ಹಿಂದೆ ತಿರುಗಿ ನೋಡಬೇಕೆಂದುಕೊಂಡವಳಿಗೆ ಯಾವುದೋ ಮಂಪರಿನಿಂದ ಹಾಗೆ ಮಾಡಲಾಗಲಿಲ್ಲ. ಎಂದಿನಂತೆ ಮತ್ತೆ ಇರುವೆಗಳು ಮೈಮೇಲೆ ಓಡಾಡತೊಡಗಿದಂತೆ ಭಾಸವಾಯಿತು. ತನ್ನ ಬೆನ್ನ ಹಿಂದೆ ಬಿಸಿಯುಸಿರಿನ ವೇಗ ಹೆಚ್ಚಿದಂತೆಲ್ಲಾ, ಅವಳಿಗೆ ತಾನು ಪ್ರಜ್ಞೆ ಸ್ವಲ್ಪ ಸ್ವಲ್ಪ ಕಳೆದುಕೊಳ್ಳುತ್ತಿರುವಂತಾಯಿತು. ತಿರುಗಿ ನೋಡಬೇಕೆನ್ನುವ ಅರಿವೂ ಕೂಡ ನಿಧಾನವಾಗಿ ಕಡಿಮೆಯಾಗುತ್ತಾ, ನಿದ್ರೆ ಬರುವಂತಾಯಿತು. ಅದೇ ಗಳಿಗೆಯಲ್ಲಿ, ಮುಷ್ಠಿಯಲ್ಲಿ ಬಿಗಿಯಾಗಿ ಹಿಡಿದಿದ್ದ ಚೂಪಾದ ಕತ್ತಾಳೆ ಮುಳ್ಳಿನ ಕೊನೆ ಅಂಗೈಗೆ ಲಘುವಾಗಿ ಚುಚ್ಚಿಕೊಂಡು, ನೋವಿನಿಂದ 'ಹಾ' ಎಂದು ಕನಸಿನ ಲೋಕಕ್ಕೆ ಜಾರುತ್ತಿದ್ದ ಸೌಮ್ಯ ಎಚ್ಚರಗೊಂಡಳು. ಅಂಗೈಯಲ್ಲಿ ಮೆಲ್ಲಗೆ ಚುಚ್ಚಿದ ಕತ್ತಾಳೆ ಮುಳ್ಳಿನಿಂದ ಒಂದು ಹನಿ ರಕ್ತಬಂದಂತಿತ್ತು. ಆತನ ಪಿಸುಮಾತುಗಳು ಸೌಮ್ಯಳಿಗೆ ಮಂಪರು ಬರಿಸಿದರೆ, ಕತ್ತಾಳೆ ಅವಳನ್ನು ಮಂಪರಿನಿಂದ ಮತ್ತೆ ವಾಸ್ತವಕ್ಕೆ ಕರೆದುಕೊಂಡು ಬಂತು. ಮಂತ್ರದ ಶಕ್ತಿಯನ್ನು ಕತ್ತಾಳೆ ಮುಳ್ಳು ಒಂದು ಕ್ಷಣ ಹಿಮ್ಮೆಟ್ಟಿಸಿತ್ತು. ಬೆನ್ನಹಿಂದೆ ನಿಂತ ಅವನು ತನ್ನ ಕೈಯಿಂದ ಅವಳ ದೇಹದ ಮೇಲೆಲ್ಲಾ ಇರುವೆ ಕಳುಹಿಸತೊಡಗಿದ್ದ. ಕತ್ತಾಳೆ ಮುಳ್ಳು ಕೈಗೆ ಚುಚ್ಚಿದ್ದಕ್ಕೆ ಪ್ರಜ್ಞೆ ಬಂದಿದ್ದ ಸೌಮ್ಯಳಿಗೆ ಈಗ ತನ್ನ ದೇಹದ ಮೇಲೆ ನಡೆಯುತ್ತಿರುವ ಆಕ್ರಮಣದ ಅರಿವಾಯಿತು. ಕೈಯಲ್ಲಿದ್ದ ಕತ್ತಾಳೆ ಮುಳ್ಳು ತಾಯಿಯಂತೆ ಧೈರ್ಯ ತುಂಬಿತ್ತು. ಬೆನ್ನಹಿಂದೆ ನಿಂತವನು ಯಾರೆಂದು ನೋಡಲೇಬೇಕೆಂದು ನಿಶ್ಚಯಿಸಿದ್ದ ಸೌಮ್ಯ ಕತ್ತನ್ನು ಸರಕ್ಕನೆ ಹಿಂದೆ ತಿರುಗಿಸಿದಳು. ಅವಳು ಪೂರ್ತಿ ಪ್ರಜ್ಞೆಯಲ್ಲಿಲ್ಲ ಎಂದು ಭಾವಿಸಿದ್ದ ಆ ವ್ಯಕ್ತಿಗೆ ಅವಳು ತಿರುಗಿ ನೋಡಿದ್ದಕ್ಕೆ ಗಾಬರಿಯಾಯಿತು. ಇಷ್ಟು ದಿನ ತನಗೆ ಯಾಮಾರಿಸುತ್ತಿದ್ದ ಆ ಗಂಡಸು ಬೇರೆ ಯಾವುದೇ ಅಪರಿಚಿತನಾಗಿರಲಿಲ್ಲ. 'ಆ ವ್ಯಕ್ತಿ' ತಾನು ಅಂಕಲ್ ಎಂದು ಕರೆಯುವ, ತಮಗೆ ದಿನಸಿಯನ್ನು ಸಾಲಕೊಡುವ ಕಿರಾಣಿ ಅಂಗಡಿ 'ನವರಂಗಿ'.